ವಿಷಯ: ದ.ಕ. ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಬಂದಿರುವ ಹಣ.

1181 (1680)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ನಬಾರ್ಡ್ ಯೋಜನೆಯಡಿ ರಾಜ್ಯಕ್ಕೆ ಒದಗಿ ಬಂದಿರುವ ಒಟ್ಟು ಮೊತ್ತ ಎಷ್ಟು: ಅದರ ವಿತರಣೆಯನ್ನು ಜಿಲ್ಲಾವಾರು ಮಾಡಲಾಗಿದೆಯೇ: ಅಥವಾ ಕ್ಷೇತ್ರವಾರು ಮಾಡಲಾಗಿದೆಯೇ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ : (ವಿವರ ನೀಡುವುದು)

ಇ) ಹೀಗೆ ಮೊತ್ತವನ್ನು ವಿತರಿಸುವಾಗ ಕೆಲವು ಕ್ಷೇತ್ರಗಳಿಗೆ ತೀರಾ ಅನ್ಯಾಯವಾಗಿರುವುದು ನಿಜವೇ? ಹಾಗಿದ್ದಲ್ಲಿ ಇದನ್ನು ಹೋಗಲಾಡಿಸಲು ಜರುಗಿಸುವ ಕ್ರಮಗಳೇನು: ಎಲ್ಲಾ ಕ್ಷೇತ್ರಗಳಿಗೂ ಸೂಕ್ತ ರೀತಿಯಲ್ಲಿ ನಬಾರ್ಡ್ ಹಣವನ್ನು ಹಂಚಿಕೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ನಬಾರ್ಡ್ ಯೋಜನೆಯಡಿ ಇಡಗಂಟು ಮೊತ್ತದ ಸಾಲ ನೀಡಲಾಗುವುದಿಲ್ಲ. ಅಧಿಕಾರ ದತ್ತ ಸಮಿತಿಯಿಂದ ಒಪ್ಪಿತವಾದ ಕಾಮಗಾರಿಗಳ ಅಂದಾಜುಗಳಿಗೆ ನಬಾರ್ಡ್‌ನಿಂದ ಅನುಮೋದನೆ ಪಡೆಯಲಾಗುವುದು. 96-97ನೇ ಸಾಲಿನಲ್ಲಿ ರಾಜ್ಯದಲ್ಲಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ 122.00 ಕೋಟಿ ರೂ.ಗಳು ಹಾಗೂ 97-98ನೇ ಸಾಲಿನಲ್ಲಿ 138.87 ಕೋಟಿ ರೂ.ಗಳ ಸಾಲ ಸಹಾಯ ಪಡೆಯಲಾಗಿದೆ. ಆದಾಗ್ಯೂ ಎಲ್ಲ ಸಾಧ್ಯವಾದ ಕ್ಷೇತ್ರಗಳಲ್ಲು ಕಾಮಗಾರಿ ತೆಗೆದುಕೊಳ್ಳಲಾಗಿದೆ.

ಆ) ಇದು ಕ್ಷೇತ್ರವಾರು ಯೋಜನೆಯಾಗಿರುವುದಿಲ್ಲ. ಒಟ್ಟಾರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಪ್ಪಿತವಾಗಿರುವ ಕಾಮಗಾರಿಗಳ ತಾಲ್ಲೂಕುವಾರು ವಿವರ ನೀಡಲಾಗಿದೆ.

ಲಕ್ಷ ರೂ.ಗಳಲ್ಲಿ

ತಾಲ್ಲೂಕು	96-97ನೇ ಸಾಲಿನಲ್ಲಿ ಸಂಖ್ಯೆ	ಮೊತ್ತ	97-98ನೇ ಸಾಲಿನಲ್ಲಿ ಸಂಖ್ಯೆ	ಮೊತ್ತ	ಒಟ್ಟಾರೆ ಸಂಖ್ಯೆ	ಮೊತ್ತ
ಮಂಗಳೂರು	2	32.00	1	15.55	3	47.55
ಬಂಟವಾಳ	2	190.00	3	64.70	5	284.70
ಪುತ್ತೂರು	1	25.95	6	157.89	7	183.84
ಸೂಳ್ಯ	2	45.12	-	-	2	45.12
ಬೆಳ್ತಂಗಡಿ	1	34.80	3	107.70	4	142.50
ಒಟ್ಟು	8	327.87	13	345.84	21	673.71

ಇ) 'ಅ'ನಲ್ಲಿ ಉತ್ತರಿಸಿರುವಂತೆ ಇದು ಕ್ಷೇತ್ರಾವಾರು ಕಾರ್ಯಕ್ರಮವಲ್ಲ. ಆದ್ದರಿಂದ ಕ್ಷೇತ್ರವಾರು ಹಂಚಿಕೆ ಉದ್ಭವಿಸುವುದಿಲ್ಲ.

ವಿಷಯ: ರಾಜ್ಯದಲ್ಲಿ ರಸ್ತೆ ನಿರ್ವಹಣೆಗೆ ಹಣ.

1183 (1673)

ಶ್ರೀ ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ರಸ್ತೆ ನಿರ್ವಹಣೆಗೆ ಕಿ.ಮೀ. ಒಂದಕ್ಕೆ ಕೊಡುತ್ತಿರುವ ಮೊತ್ತವೆಷ್ಟು?

ಆ) ಈ ಮೊತ್ತವನ್ನು ಯಾವಾಗ ಪರಿಷ್ಕರಿಸಲಾಯಿತು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ರಸ್ತೆಗಳ ನಿರ್ವಹಣೆಗಾಗಿ ಅನುದಾನವನ್ನು ಕಿಮೀ.ವಾರು ನೀಡುತ್ತಿಲ್ಲ. ರಾಜ್ಯಕ್ಕೆ ಲಭ್ಯವಾಗುವ ಒಟ್ಟು ರಸ್ತೆ ಅನುದಾನದಲ್ಲಿ ಸ್ವಲ್ಪ ಭಾಗವನ್ನು ತುರ್ತು ಕೆಲಸಗಳಿಗಾಗಿ ಮೀಸಲಾಗಿಟ್ಟು ಉಳಿದ ಇಡುಗಂಟು ಅನುದಾನವನ್ನು ರಾಜ್ಯದ ವಿವಿಧ